ರಾಜ್ಯದ ನೇಕಾರರ ಸಮಸ್ಯೆಗಳು.

468 (4404) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) :— ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪ್ರಸಕ್ತ ಸರ್ಕಾರ ರಚನೆಯಾದ ನಂತರ ರಾಜ್ಯದ ನೇಕಾರರ ಅಭಿವೃದ್ಧಿಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳೇನು?

ಆ) ನೇಕಾರರಿಗೆ ಒದಗಿಸಬೇಕಾದ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆಯೇ?

ಇ) ರಾಜ್ಯದ ನೇಕಾರರಿಗೆ ಸಮಯಕ್ಕೆ ಸರಯಾಗಿ ಸಾಕಷ್ಟು ನೂಲಿನ ಪೂರೈಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಅವರಿಗೆ ಸಮಯಕ್ಕೆ ಸರಿಯಾಗಿ ನೂಲನ್ನು ಒದಗಿಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳಾವುವು?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ಪ್ರಸಕ್ತ ಸರ್ಕಾರ ರಚನೆಯಾದ ನಂತರ ನೇಕಾರರ ಅಭಿವೃದ್ಧಿಗಾಗಿ ಅವರ ಎಲ್ಲಾ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಈ ಹಿಂದೆ ಚಾಲ್ತಿಯಲ್ಲಿದ್ದ ರಾಜ್ಯ ವಲಯದ ಎಲ್ಲಾ ಯೋಜನೆಗಳನ್ನು ಹಾಗೂ ಕೇಂದ್ರ ವಲಯದ ಕೆಲವು ಯೋಜನೆಗಳನ್ನು ಮುಂದುವರಿಸಲಾಗಿದೆ. ರಾಜ್ಯದ ನೇಕಾಕಕ ಅಭಿವೃದ್ಧಿಗಾಗಿ ಈ ಕೆಳಕಂಡ ಪ್ರಮುಖ ಕಾರ್ಯಕ್ರಮಗಳು ಚಾಲ್ತಿಯಲ್ಲಿವೆ.

<u>ಕೈಮಗ್ಗ ವಲಯ</u>

1) ಕೈಮಗ್ಗ ನೇಕಾರರಿಗೆ ದೀನದಯಾಳ್ ಹತ್ತಖಿರ್ಗಾ ಪ್ರೋತ್ಸಾಹಧನ ಯೋಜನೆ (ಹೊಸ ಯೋಜನೆ)
2) ಕೈಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆ
3) ಕೈಮಗ್ಗ ನೇಕಾರರಿಗೆ ಮಿತವ್ಯಯ ನಿಧಿ ಯೋಜನೆ.
4) ಕೈಮಗ್ಗ ನೇಕಾರರಿಗೆ ವಸತಿ ವ ಕಾರ್ಯಾಗಾರ ಯೋಜನೆ.
5) ಕೈಮಗ್ಗ ನೇಕಾರರಿಗೆ ಕಾರ್ಯಾಗಾರ ಯೋಜನೆ.
6) ಆರೋಗ್ಯ ಬುತ್ತಿ ಯೋಜನೆ
7) ಕೈಮಗ್ಗ ನೇಕಾರರ ಕಲ್ಯಾಣ ಯೋಜನೆ
8) ಕೈಮಗ್ಗ ನೇಕಾರರ ಸಹಕಾರ ಸಂಘಗಳ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆ.

ವಿದ್ಯುತ್ ಮಗ್ಗ ವಲಯ

1. ಸಾಮೂಹಿಕ ನೇಯ್ಗೆ ಕೇಂದ್ರಗಳು
2. ನೇಯ್ಗೆಪೂರ್ವ ಸೌಲಭ್ಯಗಳು
3. ವಿದ್ಯುತ್‌ಮಗ್ಗ ಸೇವಾ ಕೇಂದ್ರಗಳಿಗೆ ಧನಸಹಾಯ
4. ವಿದ್ಯುತ್‌ಮಗ್ಗ ಸಹಕಾರ ಸಂಘಗಳಿಗೆ ಷೇರು ಬಂಡವಾಳ
5. ವಿದ್ಯುತ್‌ಮಗ್ಗ ಅಭಿವೃದ್ಧಿ ನಿಗಮದ ಸ್ಥಾಪನೆ
6. ವಿದ್ಯುತ್ ಚಾಲಿತ ಮಗ್ಗ ಸಹಕಾರ ಸಂಘಗಳಿಗೆ ಎಸ್‌ಸಿಡಿಸಿ ಯೋಜನೆ.
7. ವಿದ್ಯುತ್‌ಮಗ್ಗ ನೇಕಾರರಿಗೆ ಗುಂಪು ವಿಮಾಯೋಜನೆ.

ಅ) ಆಯವ್ಯಯ ಲಭ್ಯತೆ ಆಧರಿಸಿ ಸಮರ್ಪಕವಾಗಿ ಒದಗಿಸಲಾಗುತ್ತಿದೆ.

ಇ) ಬಂದಿದೆ

ಈ) ನೇಕಾರರಿಗೆ ಸಕಾಲದಲ್ಲಿ ನೂಲು ಸರಬರಾಜು ಮಾಡಲು ವಿದ್ಯವಿಕಾಸ ಯೋಜನೆಯಡಿ ಹೆಚ್ಚುವರಿ ಮುಂಗಡ ಬೇಡಿಕೆ ಪಟ್ಟಿ ಸಲ್ಲಿಸುವುದು. ಅಗ್ಗದರದ ಪಂಚಿ ಸೀರೆ ಯೋಜನೆ ಮುಂದುವರಿಯುವುದು, ಆಯವ್ಯಯದಲ್ಲಿ ಹಣವನ್ನು ಬಿಡುಗಡೆ ಮಾಡುವುದು, ಚಿಲ್ಲರೆ ಮಾರಾಟಕ್ಕೆ ಬೆಂಬಲ ನೀಡುವುದಲ್ಲದೆ ಸರ್ಕಾರಿ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು ತಮ್ಮ ಬಟ್ಟೆ ಅವಶ್ಯಕತೆಯನ್ನು ಕೈಮಗ್ಗ ವಲಯದಿಂದ ಪೂರೈಸಿಕೊಳ್ಳುವಂತೆ ಒತ್ತಾಯಿಸುವುದು, ಇವೆ ಮುಂತಾದ ಕ್ರಮಗಳನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮತಿಯಿಂದ ತೆಗೆದುಕೊಳ್ಳಲಾಗುತ್ತಿದೆ. ಈ ಕ್ರಮಗಳಿಂದ ದಾಸ್ತಾನು ವಿಲೇವಾರಿಗೆ ಅನುಕೂಲವಾಗಿ ಆರ್ಥಿಕ ಪರಿಸ್ಥಿತಿ ಸುಧಾರಿಸಲು ನೆರವಾಗುವುದು ಹಾಗೂ ನೇಕಾರರಿಗೆ ನೂಲು ಸರಬರಾಜು ಉತ್ತಮವಾಗುವುದು.

ಶ್ರೀ ಜೆ.ಟಿ. ಪಾಟೀಲ್:— ಮಾನ್ಯ ಅಧ್ಯಕ್ಷರೆ, ನನ್ನ ಮೂಲ ಪ್ರಶ್ನೆ ಏನೆಂದರೆ ಪ್ರಸಕ್ತ ಸರ್ಕಾರ ರಚನೆ ಆದನಂತರ ಹೊಸದಾಗಿ ನೇಕರರ ಅಭಿವೃದ್ಧಿಗೆ ಹಮ್ಮಿಕೊಂಡ ಕಾರ್ಯಕ್ರಮಗಳು ಏನು ಎಂದು ನಾನು ಕೇಳಿದ್ದೇನೆ. ಆದರೆ ಪ್ರಶ್ನೆ ತಿರುಚಿ ಬಂದಿದೆ. ಕೆಲವು ಸ್ಕೀಮ್ ಪವರ್‌ಲೂಮ್ ಮತ್ತು ಹ್ಯಾಂಡ್‌ಲೂಮ್ ಸೆಕ್ಟಾರ್ ಎಂದು ಮಾಡಿದ್ದೇವೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದುವರೆಗೆ ನಮ್ಮ ಜಿಲ್ಲೆಯಲ್ಲಿ ಬಿಟ್ಟರೆ ಬೇರೆ ಯಾವುದೇ ಜಿಲ್ಲೆಗಳಲ್ಲಿ ಹ್ಯಾಂಡ್ ಲೂಮ್ ಸೊಸೈಟ್ಯಲ್ಲಿ ಥ್ರಿಫ್ಟ್ ಫಂಡ್‌ನ ಹಣ ಬಿಡುಗಡೆ ಮಾಡಿಲ್ಲ. ನಮ್ಮ ಸರ್ಕಾರ ವಿಶೇಷವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳುವುದಕ್ಕೆ ನಿರ್ಧಾರ ಮಾಡಿದೆಯಾ? ಇದು ಒಂದನೆಯದು. ಇನ್ನು ಎರಡನೆಯದು, ನೇಕಾರರಿಗೆ ಒದಗಿಸಬೇಕಾದ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಿಕೊಡುತ್ತಿದ್ದೀರಾ ಎನ್ನುವ ಪ್ರಶ್ನೆಗೆ being provided subject to budgetory provision ಎಂದು ಹೇಳಿದ್ದಾರೆ. ಇದು ಸರಿಯಾದ ಉತ್ತರ ಆಗಲಾರದು. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸಮಸ್ಯೆಗಳು ಏನಿವೆ ಅವುಗಳನ್ನು ಬಗೆಹರಿಸುವುದಕ್ಕೆ ಸಿದ್ಧರಿರುವ ಸಂದರ್ಭದಲ್ಲಿ ತಾವು ನೇಕಾರರ ಸಲುವಾಗಿ, ವಿಶೇಷವಾಗಿ

ರೈತರಿಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದೀರಿ, ಅದೇ ರೀತಿಯಲ್ಲಿ ನೇಕಾರರಿಗೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಾ ಹೇಗೆ? ಮೂರನೇಯದಾಗಿ, ನೂಲಿನ ಪೂರೈಕೆ ಸರಿಯಾಗಿ ಆಗುವುದಿಗಲ್ಲವೆಂದು ತಾವು ಒಪ್ಪಿಕೊಂಡಿದ್ದೀರಿ. ಕಳೆದ 15-20 ವರ್ಷಗಳಿಂದ ನಾವು ಸರ್ಕಾರದಿಂದ ಇದೇ ಉತ್ತರವನ್ನು ಕೇಳುತ್ತಾ ಬಂದಿದ್ದೇವೆ. ಈ ಬಗ್ಗೆ ನೀವು ಸ್ಪಷ್ಟವಾದ ಉತ್ತರ ಹೇಳಬೇಕು; ಈ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ನೀವು ಬರೀ ಕಾಗದದ ಉತ್ತರ ಹೇಳುವ ಬದಲು, ಏನಾದರೂ ಸಮಸ್ಯೆ ಬಗೆಹರಿಯುವಂತಹ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರೋ ಹೇಗೆ?

ಶ್ರೀ ಎಂ. ಮಹದೇವ್ :— ಮಾನ್ಯ ಅಧ್ಯಕ್ಷರೆ ನೇಕಾರರಿಗೆ ನೂಲು ಒದಗಿಸುವವ ವಿಚಾರದಲ್ಲಿ ಸರ್ಕಾರ ಬಹಳ ಆಸಕ್ತಿ ವಹಿಸಿ ಅವರಿಗೆ ಯಾವ ತರಹದ ಸಮಸ್ಯೆಯೂ ಆಗದಹಾಗೆ ನಾವು ಕ್ರಮಸ್ಥೆ ಮಾಡುತ್ತಿದ್ದೇವೆ. ಇದಕ್ಕೋಸ್ಕರ ನೇಕಾರರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಅದನ್ನು ಬಗೆ ಹರಿಸುವುದಕ್ಕೋಸ್ಕರ ನಾವು ಆಯಾ ಜಿಲ್ಲೆಗಳಿಗೆ ಹೋಗಿ ನೇಕಾರರ ಸಭೆಗಳನ್ನು ಕರೆದು ಈ ನೂಲು ಒದಗಿಸುವ ವಿಚಾರದಲ್ಲಿ ಮತ್ತು ಸಕಾಲದಲ್ಲಿ ಹಣ ಪಾವತಿ ಮಾಡುವ ವಿಚಾರದಲ್ಲಿ ಅವರ ಜೊತೆಯಲ್ಲಿ ವಿಚಾರ ವಿನಿಮಯ ಮಾಡುತ್ತಿದ್ದೇವೆ. ನೇಕಾರರಿಗೆ ನೂಲನ್ನು ಒದಗಿಸತಕ್ಕಂಥ ಕೆಲವು ಸಂದರ್ಭಗಳಲ್ಲಿ 15-20 ದಿವಸಗಳು ಕೂಡ ತಡವಾಗುತ್ತದೆ. ಏಕೆಂದರೆ, ಕೆಲವುಸಾರಿ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಇರುತ್ತೆ. ಕೆಹೆಚ್‌ಡಿಸಿ ಮತಿಯಿಂದ 17,000 ಕ್ಕಿಮಗ್ಗ ನೇಕಾರರು ರಾಜ್ಯದ ವಿವಿಧ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನಾವು ಸಕಾಲದಲ್ಲಿ ನೂಲನ್ನು ಒದಗಿಸುತ್ತಿದ್ದೇವೆ. ಅಂತಹ ಯಾವುದಾದರೂ ಸಮಸ್ಯೆಗಳು ಬಂದಾಗ ಕಟ್ಟುನಿಟ್ಟಿನ ಆದೇಶವನ್ನೂ ಕೊಟ್ಟಿದ್ದೇವೆ. ನೇಕಾರರಿಗೆ ನೂಲು ಒದಗಿಸುವುದಲ್ಲಾಗಲಿ, ಹಣ ಪಾವತಿ ಮಾಡುವುದರಲ್ಲಾಗಲಿ ಯಾವುದೇ ರೀತಿಯ ತೊಂದರೆ ಆಗದಹಾಗೆ ಮಾಡಬೇಕೆಂದು ನಾವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಮುಂದೆಯೂ ಕೂಡ ಯಾವುದೇ ಸಮಸ್ಯೆಗಳು ಬಾರದ ಹಾಗೆ ನಾವು ನೋಡಿಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನೇನೋ ಕೊಟ್ಟಿದ್ದಾರೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಉತ್ತರ ಕರ್ನಾಟಕದಲ್ಲಿ ಸುಮಾರು 15,000 ದಿಂದ 17,000 ದವರೆಗೆ ನೇಕಾರರು ಇದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂತೆ ವಿದ್ಯಾ ವಿಕಾಸ ಯೋಜನೆ ಮುಖಾಂತರ ಕೆಹೆಚ್‌ಡಿಸಿ ಮುಖಾಂತರ ನೂಲನ್ನು ಕೊಡುವುದು ಮತ್ತು ಅದಕ್ಕೆ ಬೇಕಾದ ಮೆಟೀರಿಯಲ್ಸ್ ಕೊಡಬೇಕೆಂದು ತೀರ್ಮಾನ ಆಗಿದೆ. ಶಿಕ್ಷಣ ಇಲಾಖೆಯಿಂದ 34 ಕೋಟಿ ರೂಪಾಯಿ ಬಗ್ಗೆ ಗ್ರೀನ್ ಸಿಗ್ನಲ್ ಕೊಟ್ಟಿಲ್ಲ. ಉತ್ತರ ಕರ್ನಾಟಕದಲ್ಲಿ ಕೆಹೆಚ್‌ಡಿಸಿ ಆಫೀಸ್ ಮುಂದೆ ನೇಕಾರರು ಧರಣಿ ಸತ್ಯಾಗ್ರಹ ಕೂತಿದ್ದಾರೆಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಎರಡು ತಿಂಗಳುಗಳಿಂದ ಕೆಹೆಚ್‌ಡಿಸಿ ನೌಕರರ ವರ್ಗಕ್ಕೆ ಸಂಬಳ ಇಲ್ಲ, ನೇಕಾರರಿಗೆ ಕೆಲಸ ಇಲ್ಲದೇ ಇರುವುದರಿಂದ ಕೂಲಿ ಕೊಟ್ಟಿಲ್ಲ. ಇಲ್ಲಿ ನೇಕಾರರು ಬಹಳ ತೊಂದರೆಯಲ್ಲಿದ್ದಾರೆ. ಹುಬ್ಬಳ್ಳಿಯ ಕ್ಕಿಮಗ್ಗ ಅಭಿವೃದ್ಧಿ ನಿಗಮವನ್ನು ಏನು ಸ್ಥಳಾಂತರ ಮಾಡಿದಿರಿ, ಅದೂ ಆ ಸಿಬ್ಬಂದಿವರ್ಗದ ವರ್ಗಾವಣೆಯಲ್ಲಿ ತೊಂದರೆಯಾಗಿದೆ. ಅಲ್ಲಿಯವರಿಗೆ ಇಲ್ಲಿ ಹಾಕುವುದು, ಇಲ್ಲಿಯವರಿಗೆ

ಅಲ್ಲಿ ಹಾಕುವುದು, ಒಂದು ಸಾರಿ ಟ್ರಾನ್ಸ್ಫರ್ ಆದರೆ ಮತ್ತೆ ಕ್ಯಾನ್ಸಲ್ ಮಾಡುವುದು, ಇವೆಲ್ಲ ನಡೆಯುತ್ತಿದೆ. ಹೀಗಾಗಿ ನೇಕಾರರು ಸಂಕಷ್ಟದಲ್ಲಿದ್ದಾರೆ. ಉತ್ತರ ಕರ್ನಾಟಕದಲ್ಲಿ 10,000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನೇಕಾರರು ತೊಂದರೆಯಲ್ಲಿದ್ದಾರೆ. ಈ ತೊಂದರೆ ನಿವಾರಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ನೇಕಾರರು ನೇಯ್ದ ವಸ್ತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ 34 ಕೋಟಿ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಿದ್ದೀರಾ ಹೇಗೆ?

ಶ್ರೀ ಎಂ. ಮಹದೇವ್ :— ಸನ್ಮಾನ್ಯ ಅಧ್ಯಕ್ಷರೆ 2000-2001ನೇ ಇಸವಿಗೆ ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗಾ ಮಧ್ಯ ಭಾಗಗಳಿಗೆ ಸಮವಸ್ತ್ರ ಸರಬರಾಜು ಮಾಡಲು ಶಿಕ್ಷಣ ಇಲಾಖೆಯಿಂದ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬೇಡಿಕೆ ಪಟ್ಟಿ ಸಲ್ಲಿಸಿದ್ದು ಈ ನಿಗಮ 35.43 ಲಕ್ಷ ಜೊತೆ ಸಮವಸ್ತ್ರಗಳನ್ನು ಕೈಮಗ್ಗದಲ್ಲಿ ಉತ್ಪಾದನೆ ಮಾಡಿ ಶಿಕ್ಷಣ ಇಲಾಖೆಗೆ ಈಗಾಗಲೇ ಸರಬರಾಜು ಮಾಡಿದೆ. ಹಾಗೆ ಸರಬರಾಜು ಮಾಡಿರುವ ಸಮವಸ್ತ್ರಗಳ ಮೌಲ್ಯ 26.69 ಕೋಟಿ ರೂಪಾಯಿಗಳು. ಶಿಕ್ಷಣ ಇಲಾಖೆಯಿಂದ ಇದುವರೆಗೆ 20 ಕೋಟಿ ರೂಪಾಯಿಗಳು ಸಂದಾಯವಾಗಿದೆ. 6.69 ಕೋಟಿ ಬಿಡುಗಡೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ತಾವು ಇನ್ನೊಂದು ವಿಚಾರ ಹೇಳಿದಿರಿ, ಹುಬ್ಬಳ್ಳಿಯಲ್ಲಿ ಹೆಡ್ ಆಫೀಸ್‌ನಿಂದ ವರ್ಗಾವಣೆ ಮಾಡಿದ್ದೀರಿ, ಅಲ್ಲಿ ಸಂಖ್ಯೆ ಕಡಿಮೆ ಆಗಿದೆ ಎಂದು ಹೇಳಿದಿರಿ. ನಾವು ಹುಬ್ಬಳ್ಳಿಯ ಹೆಡ್ ಆಫೀಸ್‌ನಲ್ಲಿ ಯಾವುದೇ ತರಹದ ವರ್ಗಾವಣೆಯನ್ನು ಮಾಡುವುದಕ್ಕೆ ಹೋಗಿಲ್ಲ. ಅಲ್ಲಿ 83 ಜನ ಹಿಂದೆ ಇದ್ದರು, ಐದು ಜನರಿಗೆ ಮಾತ್ರ ನಾವು ಅಲ್ಲಿಗೆ ಹಾಕಿದ್ದೇವೆ; ಈಗ 88 ಜನ ಕೆಲಸಗಾರರು ಇದ್ದಾರೆ. ನಾವು ಅಲ್ಲಿಗೆ ಹೆಡ್ ಆಫೀಸ್‌ನಲ್ಲಿ ಎಷ್ಟು ಅವಶ್ಯಕತೆ ಇದೆ ಅಷ್ಟನ್ನು ಮಾತ್ರ ವರ್ಗಾವಣೆ ಮಾಡುತ್ತೇವೆ. ಹುಬ್ಬಳ್ಳಿಯಲ್ಲಿ ನೌಕರರ ಸಂಬಳ ವಗೈರೆ ವಿಚಾರದಲ್ಲಿ ಹೇಳುವುದಾದರೆ ಅಲ್ಲಿ ಎರಡು ಯೂನಿಯನ್‌ಗಳಿವೆ. ನಾವು ಎಷ್ಟೇ ಪ್ರಮಾಣಿಕ ಪ್ರಯತ್ನ ಮಾಡಿ ನೇಕಾರರಿಗೆ ಸಹಾಯ ಮಾಡಬೇಕೆಂದು ಹೋದರೆ ಯೂನಿಯನ್ ವೈಷಲ್ಯದಿಂದ ಗೊಂದಲ ಎಬ್ಬಿಸುತ್ತಿದ್ದಾರೆ. ನಾವು ಸಕಾಲದಲ್ಲಿ ಎಲ್ಲ ತರಹದ ಹಣ ಪಾವತಿ ಮಾಡಿ ನೂಲನ್ನು ಒದಗಿಸುತ್ತಿದ್ದೇವೆ. ಅಲ್ಲಿ ತಪ್ಪಿತಸ್ಥರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದೇವೆ ತಪ್ಪಿತಸ್ತರು ಕೆಲವರು ಯೂನಿಯನ್‌ನಲ್ಲಿದ್ದಾರೆ ಅವರು ಈ ಗಲಭೆಯನ್ನು ಪ್ರಶ್ನೆ ಮೂಲಕ ಎಬ್ಬಿಸುತ್ತಿದ್ದಾರೆ. ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ. ನೇಕಾರರ ಹಿತದೃಷ್ಟಿಯಿಂದ ನಾವು ಯಾವುದೇ ತರಹದಲ್ಲೂ ಅವರನ್ನು ಕಡೆಗಾಣಿಸುವುದಿಲ್ಲ. ಅವರ ರಕ್ಷಣೆ ಮಾಡುತ್ತೇವೆ. ಏನಾದರೂ ವ್ಯತ್ಯಾಸ ಇದ್ದರೆ ಸರಿಪಡಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ :— ಎರಡು ತಿಂಗಳುಗಳಿಂದ ನೂಲು ಸರಬರಾಜು ಮಾಡಿಲ್ಲ.

ಶ್ರೀ ಎಂ. ಮಹದೇವ್ :— ಎರಡು ತಿಂಗಳು ಅಲ್ಲ, 15 ದಿನಗಳಿಂದ ನೂಲು ಸಪ್ಲೈ ಮಾಡಿಲ್ಲ. ನಾನು ಈಗಾಗಲೇ ಟೆಕ್ಸ್‌ಟೈಲ್ ಕಮಿಷನರ್‌ಗೆ ಆದೇಶ ಕೊಟ್ಟು ತಕ್ಷಣ ನೂಲು ಸರಬರಾಜು ಮಾಡುವುದಕ್ಕೆ ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:— ಹುಬ್ಬಳ್ಳಿಯಲ್ಲಿ ಹೆಡ್ ಆಫೀಸ್ ಮಾಡಿದರು ಅಲ್ಲಿ ಇವತ್ತಿಗೂ ಸಿಬ್ಬಂದಿ ಕೊರತೆ ಇದೆ. ನಿಮ್ಮ ವ್ಯವಸ್ಥಾಪಕ ನಿರ್ದೇಶಕರು ಸ್ಪೆಸಿಫಿಕ್ಕಾಗಿ ಕೆಲವು ಸ್ಟಾಫನ್ನು ಅಲ್ಲಿಗೆ ಕಳುಹಿಸಬೇಕೆಂದು ಆರ್ಡರ್ ಮಾಡಿದ್ದಾರೆ. ನೀವು ಕ್ಯಾನ್ಸಲ್ ಮಾಡಿದ್ದೀರಿ.

ಶ್ರೀ ಎಂ. ಮಹದೇವ್:— ಅಧಿಕೃತವಾಗಿ ನಾನು ಹೇಳುತ್ತೇನೆ, ಹುಬ್ಬಳ್ಳಿ ಹೆಡ್ ಆಫೀಸ್‌ನಲ್ಲಿ 88 ಜನ ಕೆಲಸಮಾಡುತ್ತಿದ್ದಾರೆ. ನಾವು ಇಬ್ಬರಿಗೆ ವರ್ಗಾವಣೆ ಮಾಡಿದ್ದೇವೆ. ಅವರು ಅಲ್ಲಿ ಹೋಗುವುದಕ್ಕೆ ತಿರಸ್ಕರಿಸಿರುವುದರಿಂದ ಒಬ್ಬರನ್ನು ಸಸ್ಪೆಂಷನ್‌ನಲ್ಲಿ ಇಟ್ಟಿದ್ದೇವೆ. ಇಬ್ಬರನ್ನು ಅಲ್ಲಿಗೆ ಹೋಗುವುದಕ್ಕೆ ಆದೇಶ ಕೊಟ್ಟಿದ್ದೇವೆ. ಇದರಿಂದ ಹೆಡ್ ಆಫೀಸ್‌ನಲ್ಲಿ ಯಾವುದೇ ಕಾರಣದಿಂದ ಚೆಕ್ ಬಂದಿಯನ್ನು ನಾವು ಮಾಡಿಲ್ಲ. ಉಳಿದವರಿಗೆ ಅಲ್ಲಿಗೆ ವರ್ಗಾವಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರಾಮದಾಸ್:— ಮಾನ್ಯ ಅಧ್ಯಕ್ಷರೆ, ಈ ಹಿಂದೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದ ಒಂದು ಎನ್‌ಕ್ವೈರಿ ಕಮಿಷನ್ ಆಗಿತ್ತು. ಕೇಂದ್ರ ಕಛೇರಿ ಸಂಪೂರ್ಣವಾಗಿ ಹುಬ್ಬಳ್ಳಿಗೆ ವರ್ಗವಾಗಬೇಕೆಂದು ಆ ಕಮಿಷನ್ ತನ್ನ ವರದಿಯಲ್ಲಿ ಹೇಳಿದೆ. ಆದರೆ ಈಗ ಎರಡೂ ಕಡೆಗಳಲ್ಲಿ ಕಛೇರಿ ನಡೆಯುತ್ತಿದ್ದು ಅದರ ಎಂ.ಡಿ.ಯವರು ಶೇಕಡ 75ರಷ್ಟು ತಮ್ಮ ಕಾರ್ಯವನ್ನು ಬೆಂಗಳೂರುನಲ್ಲಿಯೇ ಮಾಡುತ್ತಿದ್ದಾರೆ. ಈಗ ಇಲ್ಲೂ ಇರುವ ಮತ್ತು ಅಲ್ಲೂ ಇರುವ ಎರಡೂ ಕಡೆಗಳ ಕಛೇರಿಗೆ ಸಂಪೂರ್ಣವಾದ ಬಾಡಿಗೆಯನ್ನು ಸರ್ಕಾರ ಕೊಡುತ್ತಿರುವುದನ್ನು ತಪ್ಪಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ಮಾನ್ಯ ಸಭಾ ನಾಯಕರಿಗೆ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:— ಮಾನ್ಯ ಅಧ್ಯಕ್ಷರೆ, ಪ್ರತಿನಿತ್ಯ ನೇಕಾರರಿಗೆ ಅಧಿಕಾರಿಗಳಿಂದ ಕಿರುಕುಳ ಆಗುತ್ತಿದೆ. ಉದರ ಬಗ್ಗೆ ಸಚಿವರು ಉತ್ತರ ಕೊಡಬೇಕು. ಎನ್‌ಫೋರ್ಸ್‌ಮೆಂಟ್ ನೇಕಾರರಿಗೆ ಆಗುತ್ತಿದೆ.

ಶ್ರೀ ಯು.ಆರ್. ಸಭಾಪತಿ:— ಮಾನ್ಯ ಅಧ್ಯಕ್ಷರೆ, ಕಳೆದು ಹದಿನೈದು ವರ್ಷಗಳಿಂದ ಕೇಂದ್ರದಿಂದ ನೇಕಾರರ ಸಹಕಾರ ಸಂಘಗಳಿಗೆ ಬರುತ್ತಿದ್ದ ಸಹಾಯಧನ 2000-2001ನೇ ಸಾಲಿನಿಂದ ನಿಂತಿದೆ. ಈ ವಿಷಯದ ಬಗ್ಗೆ ರಾಜ್ಯದ ಸಚಿವರು ಕೇಂದ್ರ ಸರ್ಕಾರದೊಂದಿಗೆ ಯಾವ ರೀತಿ ಸ್ಪಂಧಿಸಿದ್ದಾರೆ? ನೇಕಾರರಿಗೆ ಸಹಾಯಧನ ಸಿಗದಿರುವುದರಿಂದ ಎಲ್ಲಾ ನೇಕಾರರ ಸಹಕಾರ ಸಂಘಗಳಲ್ಲಿ ಲಕ್ಷಾಂತರ ರೂಪಾಯಿಗಳ ದಾಸ್ತಾನು ಇದ್ದು ಮಾರಾಟವಾಗದೇ ನಷ್ಟದಲ್ಲಿ ನಡೆಯುತ್ತಿದೆ. ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕೇರಳದಲ್ಲಿ ಶೇಕಡ 30ರಷ್ಟು ಸಹಾಯಧನವನ್ನು ಕೊಡುತ್ತಿದ್ದಾರೆ. ಅದೇ ರೀತಿ ಕರ್ನಾಟಕ ಸರ್ಕಾರ ನೇಕಾರರಿಗೆ ಸಹಾಯಧನ ಕೊಡಲು ಇಚ್ಛಿಸಿಡುತ್ತದೆಯೇ? ಕೇಂದ್ರ ಸರ್ಕಾರದ ಈಗಿನ ನಿಲುವಿನಲ್ಲಿ ಬದಲಾವಣೆ ಮಾಡುವುದಕ್ಕೆ ರಾಜ್ಯ ಸರ್ಕಾರ ಏನಾದರೂ ಪ್ರಯತ್ನ ಮಾಡಿದೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಎಂ. ಮಹದೇವ್ :— ಮಾನ್ಯ ಅಧ್ಯಕ್ಷರೆ, ಎನ್‌ಫೋರ್ಸ್‌ಮೆಂಟ್ ಬಗ್ಗೆ ಅದು ರೇಷ್ಮೆ ವಿನಿಮಯ ಕೇಂದ್ರದ ವ್ಯಾಪ್ತಿಗೆ ಬರುವುದರಿಂದ ಶ್ರೀ ಸುಬ್ಬಾರೆಡ್ಡಿಯವರು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಅದಕ್ಕೆ ಉತ್ತರ ಕೊಡಲು ನಾನು ಸಿದ್ಧನಿದ್ದೇನೆ. ಎರಡನೆಯದಾಗಿ, ಕೇಂದ್ರ ಸರ್ಕಾರ ದೀನದಯಾಳ್ ಹತ್ತೂರ್ಗಾ ಯೋಜನೆಯನ್ನು ಹಾಕಿಕೊಂಡು ಎಂ.ಡಿ.ಎಯಲ್ಲಿ ಏನು ಸೌಲಭ್ಯಗಳನ್ನು ಕೊಡಲಾಗುತ್ತಿತ್ತೋ ಆ ಸೌಲಭ್ಯಗಳನ್ನು ಹೊಸ ರೇಷ್ಮೆ ಜವಳಿ ನೀತಿಯಿಂದ ಈಗ ದೀನದಯಾಳ್ ಹತ್ತೂರ್ಗಾ ಯೋಜನೆಯಲ್ಲಿ ಈ ಸೌಲಭ್ಯಗಳನ್ನು ಕೊಟ್ಟು ನೇಕಾರರಿಗೆ ಸಹಾಯ ಮಾಡಬೇಕೆಂದು ಹೇಳಿ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಕೇಂದ್ರ ಸರ್ಕಾರ ಈಗಾಗಲೇ ಜವಳಿ ನೀತಿಯನ್ನು ಪ್ರಕಟಿಸಿದ್ದರಿಂದ ರಾಜ್ಯ ಸರ್ಕಾರವೂ ಕೂಡ ಅದಕ್ಕೆ ಅನುಗುಣವಾಗಿ ಜವಳಿ ನೀತಿಯನ್ನು ಮಾಡಲು ಕಾಯಿದೆ ಮಾಡಲು ಸರ್ಕಾರ ಪರಿಶೀಲನೆಯನ್ನು ಮಾಡುತ್ತದೆ. ಹೊಸ ದೀನದಯಾಳ್ ಹತ್ತೂರ್ಗಾ ಯೋಜನೆಯಲ್ಲಿ ಕೈಮಗ್ಗ ಕ್ಷೇತ್ರದ ಸಮಗ್ರ ಅಭಿವೃದ್ಧಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ, ಕೈಮಗ್ಗ ಸಂಸ್ಥೆಗಳಿಗೆ ಸಹಾಯ ನೇಕಾರರಿಗೆ ತರಬೇತಿ, ನೇಕಾರರಿಗೆ ಆಧುನಿಕ ಉಪಕರಣಗಳನ್ನು ರೀಯಾಯಿತಿ ದರದಲ್ಲಿ ಸರಬರಾಜು ಮಾಡುವುದು, ಮಾರುಕಟ್ಟೆಗೆ ಸಹಾಯಧನ ಇತ್ಯಾದಿಗಳು ಈ ಯೋಜನೆಯಲ್ಲಿ ಬರುತ್ತದೆ.

ಶ್ರೀ ವಸಂತ ವಿ. ಸಾಲಿಯಾನ :— ಎಷ್ಟು ವರ್ಷದಿಂದ ಸಬ್ಸಿಡಿ ಸಿಗುತ್ತಿಲ್ಲ ಎಂಬುದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ. ಮಹದೇವ್ :— ರಾಜ್ಯ ಸರ್ಕಾರ ಏನು ಪಾಲು ಕೊಡಬೇಕಾಗಿತ್ತೋ ಅದನ್ನು ನಾವು ಈಗಾಗಲೇ ಕೊಟ್ಟುಬಿಟ್ಟಿದ್ದೇವೆ ಕೇಂದ್ರ ಸರ್ಕಾರದವರು ಕೊಡಬೇಕಾಗಿದ್ದ ಸಹಾಯಧನವನ್ನು ಎರಡು ವರ್ಷದಿಂದ ಸ್ಥಗಿತಗೊಳಿಸಿದ್ದಾರೆ. ಅದು ನಮ್ಮ ಜವಾಬ್ದಾರಿಯಲ್ಲ.

ಶ್ರೀ ಯು.ಆರ್. ಸಭಾಪತಿ :— ಮಾನ್ಯ ಅಧ್ಯಕ್ಷರೆ ಈಗಾಗಲೇ ಸಹಾಯಧನ ಪಡೆದುಕೊಳ್ಳದೇ ಈ ವರ್ಷ ಸಹಕಾರ ಸಂಘಗಳಲ್ಲಿ ಲಕ್ಷಾಂತರ ರೂಪಾಯಿಗಳ ದಾಸ್ತಾನು ಮಾರಾಟವಾಗದೇ ಹಾಗೆಯೇ ಇದೆ. ಅದನ್ನು ನಾವು ಮಾರ್ಕೆಟ್‌ಗೆ ತರಬೇಕಾಗಿದೆ. ಆ ರೀತಿ ದಾಸ್ತಾನು ಮಾರ್ಕೇಟ್‌ಗೆ ತರದಿದ್ದರೆ ಎಲ್ಲಾ ಸೊಸೈಟಿಗಳು ದಿವಾಳಿಯಾಗುವ ಪರಿಸ್ಥಿತಿಗೆ ಬರುತ್ತದೆ. ಆ ಹೊಸ ಸ್ಕೀಮ್‌ನಿಂದ ಸೊಸೈಟಿಗಳಿಗೆ ಏನೂ ಪ್ರಯೋಜನವಾಗುವುದಿಲ್ಲವೆಂದು ಇವರು ಹೇಳುತ್ತಿದ್ದಾರೆ. ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲಿ, ಅದನ್ನು ನಾವು ಬೇಡವೆಂದು ಹೇಳುವುದಿಲ್ಲ. ಈಗಾಗಲೇ 2000-2001ನೇ ಸಾಲಿನಲ್ಲಿ ಸಹಾಯಧನ ಬರದೇ, ಮಾರಾಟವಾಗದೇ ಇರುವ ದಾಸ್ತಾನಿನ ಬಗ್ಗೆ ರಾಜ್ಯ ಸರ್ಕಾರ ಯಾವ ನಿಲುವನ್ನು ತೆಗೆದುಕೊಂಡಿದೆ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಂ.ಮಹದೇವ್ :— ಅದಕ್ಕೋಸ್ಕರವೇ ಕೇಂದ್ರ ಸರ್ಕಾರ ದೀನದಯಾಳ್ ಹತ್ತೂರ್ಗಾ ಯೋಜನೆಯನ್ನು ತಂದಿರುವುದು. ಆ ಯೋಜನೆಯಲ್ಲಿ ಈ ವಿಚಾರ ಬರುತ್ತದೆ.

ಶ್ರೀ ಜೆ.ಟಿ. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಥ್ರೀಫ್ಟ್ ಫಂಡ್‌ನ್ನು ಹಲವಾರು ಸಂಸ್ಥೆಗಳಿಗೆ ಕೊಟ್ಟಿಲ್ಲ. ಅದನ್ನು ಎಷ್ಟು ದಿವಸಗಳಲ್ಲಿ ಕೊಡುತ್ತಾರೆ ಎಂಬ ಬಗ್ಗೆ ಹೇಳಬೇಕು. ಇನ್ನು ಎರಡನೆಯದಾಗಿ ಹಿಂದೆ 28 ಸಾವಿರ ನೇಕಾರರು ಇದ್ದುದ್ದು ಇಂದು 12 ಸಾವಿರಕ್ಕೆ ಬಂದು ನಿಂತಿದೆ. ಈ 12 ಸಾವಿರ ನೇಕಾರರಿಗಾದರೂ ಸರ್ಕಾರ ಸಕಾಲದಲ್ಲಿ ನೂಲನ್ನು ಸರಬರಾಜು ಮಾಡದಿದ್ದರೆ ಅವರ ಪರಿಸ್ಥಿತಿ ಏನಾಗಬೇಕು? ನೇಕಾರರಿಗೆ ನೇಕಾರಿಕೆಯನ್ನು ಬಿಟ್ಟು ಬಿಸಿಲಿನಲ್ಲಿ ಹೋಗಿ ಕುಳಿತು ಕೆಲಸ ಮಾಡಲು ಬರುವುದಿಲ್ಲ. ಅವರಿಗೆ ಬೇರೆ ಉದ್ಯೋಗ ಬರುವುದಿಲ್ಲ. ಆದ ಕಾರಣ ಇನ್ನು 15 ದಿವಸಗಳಲ್ಲಿ ಅವರಿಗೆ ನೂಲನ್ನು ಸರಬರಾಜು ಮಾಡಬೇಕು. ಇನ್ನು ಹುಬ್ಬಳ್ಳಿಗೆ ಕೇಂದ್ರ ಕಛೇರಿ ಸ್ಥಳಾಂತರವಾಗಬೇಕೆಂದು ರಾಜ್ಯ ಸಾರ್ಕಾರದ ಆದೇಶ ಮೂರು ವರ್ಷಗಳ ಹಿಂದೆಯೇ ಆಗಿದ್ದರೂ ಕೂಡ ಇಲ್ಲಿಯವರೆಗೆ ಕೇಂದ್ರ ಕಛೇರಿ ಸ್ಥಳಾಂತರವಾಗಿಲ್ಲ. ಪತ್ರಿಕೆಯಲ್ಲಿ ಕೇಂದ್ರ ಕಛೇರಿ ಸ್ಥಳಾಂತರವಾಗದಿರಲು ಮಂತ್ರಿಗಳೇ ಕಾರಣ ಎನ್ನು ಹಾಗೆ ಸುದ್ದಿ ಬಂದಿದೆ. ಇದು ಸತ್ಯವೇ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ. ಮಹದೇವ್ :— ನಾನು ಆಗಲೇ ಉತ್ತರ ಕೊಡುವಾಗ, ಅಲ್ಲಿ ಎರಡು ಯೂನಿಯನ್‌ಗಳು ಇದ್ದು ಇವರುಗಳು ಸರ್ಕಾರಕ್ಕೆ ಕೆಟ್ಟ ಹೆಸರು ಬರುವಹಾಗೆ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ ಎಂದು ಹೇಳಿದ್ದೆ. ಅಲ್ಲಿ ಯೂನಿಯನ್‌ರವರು ಮಾಡಿದ ಕೆಲವು ತಪ್ಪು ಕೆಲಸಗಳಿಗೆ ಅವರ ಮೇಲೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡದ್ದರಿಂದ ಅವರು ಆ ರೀತಿ ಹೇಳಿಕೆಯನ್ನು ಪತ್ರಿಕೆಗಳಲ್ಲಿ ಕೊಡುತ್ತಿದ್ದಾರೆ. ನೇಕಾರರ ಪರವಾಗಿಯೇ ಸರ್ಕಾರವಿರುವುದರಿಂದ ಕೇಂದ್ರ ಕಛೇರಿಯನ್ನು ಸ್ಥಳಾಂತರ ಮಾಡಲು ನಾವು ಅಡ್ಡಗಾಲು ಹಾಕುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಆ ರೀತಿ ಭಾವಿಸದೇ ಏನೇ ಸಮಸ್ಯೆಗಳು ಇದ್ದರೂ ಕೂಡ ನಮ್ಮ ಗಮನಕ್ಕೆ ತಂದರೆ ಅದನ್ನು ನಾವು ಬಗೆಹರಿಸುತ್ತೇವೆ. ಆದಷ್ಟೋಸ್ಥರವೇ ನಿಮ್ಮ ನೇತೃತ್ವದಲ್ಲಿಯೇ ಬಿಜಾಪುರದಲ್ಲಿ ನೇಕಾರರ ಸಮ್ಮೇಳನವನ್ನು ನಡೆಸಿದಾಗ ನೇಕಾರರ ಸಮಸ್ಯೆಗಳ ಬಗ್ಗೆ ನೀವು ನಮಗೆ ಹೇಳಿದ್ದೀರಿ. ಆಗ ನಾನು ನೇಕಾರರ ಸಮಸ್ಯೆಗಳನ್ನು ಬಗೆಹರಿಸುತ್ತೇನೆಂದು ಆಶ್ವಾಸನೆಯನ್ನು ಕೂಡ ಕೊಟ್ಟಿರುವುದರಿಂದ ಅದನ್ನು ಬಗೆಹರಿಸಲು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ ಪತ್ರಿಕೆಗಳಲ್ಲಿ ಬಂದ ವಿಷಯವನ್ನು ನಾನು ಹೇಳಬಯಸುತ್ತೇನೆ. ಈಗೇನು ವಿದ್ಯಾ ವಿಕಾಸ ಯೋಜನೆ ಇದೆ ಅದರಲ್ಲಿ 34 ಕೋಟಿ ರೂ.ಗಳೇನಿದೆ ಅದರಲ್ಲಿ ಶೇಕಡ 75ರಷ್ಟು ಕ್ಷೇಮಗ್ಗ ಅಭಿವೃದ್ಧಿ ನಿಗಮಗಳ ಮೂಲಕ ಕ್ಷೇಮಗ್ಗ ನೇಕಾರರಿಗೆ ಕೊಡುತ್ತೇವೆಂದು ಮತ್ತು ಶೇಕಡ 25 ರಷ್ಟು ವಿದ್ಯುತ್ ಕ್ಷೇಮಗ್ಗದವರಿಗೆ ಕೊಡಬೇಕೆಂದು ನೀವೇನು ಹೇಳಿದ್ದೀರಿ ಆ ರೇಶಿಯೋದಲ್ಲಿ ಏನೂ ಬದಲಾವಣೆಯಾಗುವುದಿಲ್ಲ ತಾನೆ? ಏಕೆಂದರೆ ಈ ರೇಶಿಯೋವನ್ನು ಬದಲಾವಣೆ ಮಾಡಲು ತಾವು ಚಿಂತನೆ ಮಾಡುತ್ತಿದ್ದೀರಿ ಎಂದು ಕೇಳಿದ್ದೆ. ಆದರೇ ಈಗಾಗಲೇ ಮುಖ್ಯಮಂತ್ರಿಗಳು ಶೇಕಡ 75ರಷ್ಟು ಕ್ಷೇಮಗ್ಗ ನಿಗಮಗಳಿಗೆ ಹಾಗೂ ಶೇಕಡ 25 ರಷ್ಟು ವಿದ್ಯುತ್ ಮಗ್ಗಗವರಿಗೆ ಕೊಡಲಾಗುವುದೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎಂ. ಮಹದೇವ್ :— ಮಾನ್ಯ ವಿರೋಧಪಕ್ಷದ ನಾಯಕರು ವ್ಯಕ್ತಪಡಿಸಿದ ನನ್ನ ಮೇಲಿನ ಅನುಮಾನವನ್ನು ಅವರು ಹಿಂತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಆದೇಶವೇನಿದೆ ಅದನ್ನು ನಾವು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆ. ಶೇಕಡಾ 75ರಷ್ಟು ಕೈಮಗ್ಗ ನೇಕಾರರಿಗೆ ಮತ್ತು ಶೇಕಡ 25 ರಷ್ಟು ವಿದ್ಯುತ್ ಮಗ್ಗ ನೇಕಾರರಿಗೆ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಅದರಂತೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಹುಣಸೂರು ಪಟ್ಟಣದಲ್ಲಿ ಒಳಚರಂಡಿ ಯೋಜನೆ.

469(4497) ಶ್ರೀ ವಿ. ಪಾಪಣ್ಣ (ಹುಣಸೂರು) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ಪಟ್ಟಣದಲ್ಲಿ 2.5 ಕೋಟಿ ವೆಚ್ಚದಲ್ಲಿ ಒಳಚರಂಡಿ ಯೋಜನೆ ಕೆಲಸ ಪೂರ್ಣವಾಗಿದ್ದು ಅದು ಕಾರ್ಯಗತಗೊಳ್ಳದೆ ಒಳಚರಂಡಿಯೊಳಗೆ ಕಸ ಕಲ್ಮಶಗಳು ತುಂಬಿಕೊಂಡು ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಒಳಚರಂಡಿಗೆ ಸಂಪರ್ಕ ಕೊಡದಿರಲು ಕಾರಣವೇನು? ಒಳಚರಂಡಿಯನ್ನು ಸಂಪೂರ್ಣ ಸಂಪರ್ಕ ಕಾರ್ಯಗತಗೊಳಿಸಲು ಎಷ್ಟು ಸಮಯಬೇಕು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಹೌದು.

ಆ) ಈ ಯೋಜನೆಯಡಿಯಲ್ಲಿ ಗ್ರಾಮಸಾರ ಶೇಖರಣಾ ವ್ಯವಸ್ಥೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು1985ರಲ್ಲಿ ಪೂರ್ಣಗೊಳಿಸಿ ಹುಣಸೂರು ಪುರಸಭೆಯ ವಶಕ್ಕೆ ನೀಡಲಾಗಿದೆ. ಹಾಳು ಗುಂಡಿಗಳಿಗೆ ಅಳವಡಿಸಿದ್ದ ಬೀಡು ಕಬ್ಬಿಣದ ಮುಚ್ಚಳಗಳನ್ನು ಕೆಲವು ಪ್ರದೇಶಗಳಲ್ಲಿ ದುಷ್ಕರ್ಮಿಗಳು ಕದ್ದು ಹೋಗಿರುವುದರಿಂದ ಕಸ ಕಲ್ಮಶಗು ಮಳೆ ನೀರಿನ ಜೊತೆಗೂಡಿ ಹಾಳು ಗುಂಡಿಗಳ ಮೂಲಕ ಕೊಳವೆಗಳಲ್ಲಿ ಸೇರಿ ಕೊಳವೆ ಮಾರ್ಗಗಳು ನಿಷ್ಕ್ರಿಯವಾಗಿವೆ ಒಳ ಚರಂಡಿ ವ್ಯವಸ್ಥೆ ಸಂಪರ್ಕಗಳನ್ನು ಹುಣಸೂರು ಪುರಸಭೆಯು ನೀಡುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಈ ವ್ಯವಸ್ಥೆಯನ್ನುಸರಿಪಡಿಸಿ ಗೃಹ ಸಂಪರ್ಕಗಳನ್ನು ನೀಡಲು ಹುಣಸೂರು ಪುರಸಭೆಗೆ ಸೂಚನೆ ನೀಡಲಾಗಿದೆ.

ಶ್ರೀ ವಿ. ಪಾಪಣ್ಣ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ ಸುಮಾರು 2.5 ಕೋಟಿ ರೂಪಾಯಿಗಳ ವೆಚ್ಚದಲ್ಲಿ 1985ರಲ್ಲಿಯೇ ಒಳಚರಂಡಿ